ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 139
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
3. ಉತ್ತರಿಸಬೇಕಾದ ದಿನಾಂಕ : 21.09.2020
4. ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಬ್ಬು ಬೆಳೆಗಾರರ ಹಿತ ಕಾಪಾಡಲು ರಚಿಸಲಾಗಿರುವ ಸಕ್ಕರೆ ಹಾಗೂ ಕಬ್ಬು ನಿರ್ದೇಶನಾಲಯವು ರೈತರ ಬಗ್ಗೆ ಕಾಳಜಿ ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವು ಕಬ್ಬು ಬೆಳೆಗಾರ ರೈತರ ಹಿತದೃಷ್ಟಿಯಿಂದ 2019-20ನೇ ಸಾಲಿನಲ್ಲಿ ಈ ಕೆಳಕಂಡ ಪ್ರಮುಖ ಕಾರ್ಯಗಳನ್ನು ನಿರ್ವಹಿಸಿರುತ್ತದೆ. 1. 2019-20ನೇ ಸಾಲಿನಲ್ಲಿ ಕಾರ್ಖಾನೆಗಳಿಗೆ ಸರಬರಾಜಾಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (ಎಫ್ಆರ್‌ಪಿ) ಘೋಷಿಸಲಾಗಿದೆ. ಆ ಪ್ರಕಾರವಾಗಿ ಶೇ.9.5 ಮತ್ತು ಅದಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ. ಟನ್‌ಗೆ ರೂ.2613/- ಹಾಗೂ ಶೇ.10 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.2750/- ಗಳಷ್ಟು ನಿಗದಿಗೊಳಿಸಲಾಗಿದೆ. ಶೇ.10 ರ ನಂತರದ ಪ್ರತಿ ಶೇ.1 ರಷ್ಟು ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.275/- ರಂತೆ ಹೆಚ್ಚುವರಿ ಬೆಲೆ ನಿಗದಿಗೊಳಿಸಲಾಗಿದೆ. 2. 2019-20ನೇ ಸಾಲಿನ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ವಿವರಗಳನ್ನು ಗಮನದಲ್ಲಿಟ್ಟುಕೊಂಡು ರೈತರ ಹಿತದೃಷ್ಟಿಯಿಂದ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಎಲ್ಲ ಕಾರ್ಖಾನೆಗಳು ಈ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಸೂಚಿಸಲಾಗಿದೆ. ಕಳೆದ 3 ವರ್ಷಗಳಿಂದ ಕಬ್ಬು ಕಟಾವು ಮತ್ತು ಸಾಗಾಣಿಕೆ ಸಂಬಂಧ ಮಾರ್ಗಸೂಚಿಗಳನ್ನು ಪರಿಷ್ಕರಿಸಿರಲಿಲ್ಲ. ಈ ಸಂಬಂಧ ಒಂದು ಸಮಿತಿಯನ್ನು ರಚಿಸಿ ಮಹಾರಾಷ್ಟ್ರ ರಾಜ್ಯದಲ್ಲಿ ಅನುಸರಿಸುತ್ತಿರುವ ಮಾದರಿಯನ್ನುಅಧ್ಯಯನ ನಡೆಸಿ ವರದಿ ಪಡೆದು, ಈ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಇದರಿಂದಾಗಿ ರಾಜ್ಯದ ಕಬ್ಬು ಬೆಳೆಗಾರ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. 3. ರೈತರು ಬೆಳೆದ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಸರ್ಕಾರವು ದಿನಾಂಕ 12.03.2013 ರಲ್ಲಿ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013ನ್ನು ಜಾರಿಗೆ ತಂದಿದ್ದು, ತಿದ್ದುಪಡಿ ಅಧಿನಿಯಮ 2014ನ್ನು ದಿನಾಂಕ 22.08.2014 ರಲ್ಲಿ ಜಾರಿಗೆ ತರಲಾಗಿದೆ. ಅಧಿನಿಯಮ 2014 ರಲ್ಲಿನ ಕಲಂ 8(1) ರಲ್ಲಿನ ಅವಕಾಶಗಳಂತೆ ಕಬ್ಬಿನ ದರವನ್ನು ಎರಡು ಹಂತಗಳಲ್ಲಿ ರೈತರಿಗೆ ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಅವಕಾಶಗಳಂತೆ ಮೊದಲ ಹಂತದಲ್ಲಿ ಎಫ್.ಆರ್.ಪಿ. ಪಾವತಿಯಾದರೆ, ಎರಡನೇ ಹಂತದಲ್ಲಿ ಆದಾಯ ಹಂಚಿಕೆ ಸೂತ್ರದನ್ವಯ ಪ್ರಾಪ್ತವಾದ ಆದಾಯವನ್ನು ಲೆಕ್ಕಾಚಾರ ಮಾಡಿ ಹೆಚ್ಚುವರಿ ಕಬ್ಬಿನ ದರ ಪಾವತಿಯಾಗುವಂತೆ ಕ್ರಮವಿಡಲಾಗುತ್ತಿದೆ.

4. 2019-20ನೇ ಸಾಲಿನಲ್ಲಿ ರೈತರು ಸರಬರಾಜು ಮಾಡಿದ ಕಬ್ಬಿಗೆ ಕಾರ್ಖಾನೆಗಳು ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.10622.76 ಕೋಟಿಗಳಷ್ಟಿತ್ತು. ಈ ಪೈಕಿ ದಿನಾಂಕ 31.08.2020ರ ಅಂತ್ಯಕ್ಕೆ ಪಾವತಿಯಾಗಿರುವ ಮೊತ್ತ ರೂ.10655.14 ಕೋಟಿಗಳಾಗಿರುತ್ತದೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳು ಎಫ್‌ಆರ್‌ಪಿ ದರಗಿಂತಲೂ ಹೆಚ್ಚಿಗೆ ಪಾವತಿಸಿರುತ್ತವೆ. 47 ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ಕಬ್ಬು ಬಿಲ್ ಬಾಕಿ ಪಾವತಿಸಿರುತ್ತವೆ. 15 ಕಾರ್ಖಾನೆಗಳಿಂದ ಮಾತ್ರ ಬಾಕಿ ಇರುತ್ತದೆ. ಈ ಕಾರ್ಖಾನೆಗಳು ಪಾವತಿಸಬೇಕಾದ ಬಾಕಿ ಮೊತ್ತ ರೂ.169.02 ಕೋಟಿಗಳಷ್ಟಿರುತ್ತದೆ. ಬಾಕಿ ವಸೂಲಾತಿಗೆ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ.

5. ಸಕ್ಕರೆ ಕಾರ್ಖಾನೆಗಳು ರೈತರು ಸರಬರಾಜು ಮಾಡುವ ಕಬ್ಬಿಗೆ ಹಂಗಾಮು ಪ್ರಾರಂಭಿಸುವ ಪೂರ್ವದಲ್ಲಿ ಕಡ್ಡಾಯವಾಗಿ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಇದರಿಂದಾಗಿ ರೈತರಿಗೆ ತಾವು ಬೆಳೆದಂತಹ ಕಬ್ಬನ್ನು ಒಪ್ಪಂದದ ಪ್ರಕಾರ ಸಕಾಲದಲ್ಲಿ ಕಟಾವು ಮಾಡಲು ಮತ್ತು ಕಾರ್ಖಾನೆಗಳಿಗೆ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲವಾಗಲಿದೆ.

6. ಆರ್ಥಿಕ ಸಂಕಷ್ಟದಿಂದ ಮತ್ತು ಇತರೆ ಕಾರಣಗಳಿಂದ ಸ್ಥಗಿತಗೊಂಡಿದ್ದ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಪಾಂಡವಪುರ, ಮಂಡ್ಯ ಜಿಲ್ಲೆ ಮತ್ತು ಶ್ರೀ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚುಂಚನಕಟ್ಟೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಈ ಎರಡೂ ಕಾರ್ಖಾನೆಗಳನ್ನು 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡುವ ಮೂಲಕ ಪುನಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

7. 2020-21ನೇ ಸಾಲಿನಲ್ಲಿ ಕಾರ್ಖಾನೆಗಳಿಗೆ ಸರಬರಾಜಾಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಕೇಂದ್ರ ಸರ್ಕಾರವು ದಿನಾಂಕ 26.08.2020 ರಂದು ಘೋಷಿಸಿರುತ್ತದೆ. ಆ ಪ್ರಕಾರವಾಗಿ ಶೇ.9.5 ಮತ್ತು ಅದಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ. ಟನ್‌ಗೆ ರೂ.2701/- ಹಾಗೂ ಶೇ.10 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.2850/- ಗಳಷ್ಟು ನಿಗದಿಗೊಳಿಸಲಾಗಿದೆ. ಶೇ.10 ರ ನಂತರದ ಪ್ರತಿ ಶೇ.1 ರಷ್ಟು ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.285/-ರಂತೆ ಹೆಚ್ಚುವರಿ ಬೆಲೆ ನಿಗದಿಗೊಳಿಸಲಾಗಿದೆ. ಈ ಆಧಾರದ ಮೇಲೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೈತರಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ನಿಗದಿಗೊಳಿಸಲು ಸಕ್ಕರೆ ನಿರ್ದೇಶನಾಲಯದಿಂದ ಕ್ರಮವಿಡಲಾಗುತ್ತಿದೆ.

8. ರಸ್ತೆ ಕರ ಯೋಜನೆಯಡಿ ರೂ.10.00 ಕೋಟಿಗಳನ್ನು 2019-20ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಗೊಳಿಸಲಾಗಿದ್ದು, ಈ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಸಕಾಲದಲ್ಲಿ ಬಿಡುಗಡೆಗೊಳಿಸುವ ಮೂಲಕ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿಗಾಗಿ ಕ್ರಮವಿಡಲಾಗಿದೆ.

		9. ಕಬ್ಬು ಬೆಳೆಗಾರರ ಹಿತ ಕಾಪಾಡುವ ಉದ್ದೇಶದಿಂದ ಸಕ್ಕರೆ ಉದ್ದಿಮೆಗಳಲ್ಲಿ ಸಕ್ಕರೆ ತಂತ್ರಜ್ಞಾನ ಅಭಿವೃದ್ಧಿ, ರೈತರಿಗೆ ತರಬೇತಿ, ಕಬ್ಬು ಪ್ರದೇಶ ವಿಸ್ತರಣಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯದ ಉತ್ತರ ಭಾಗದ ಬೆಳಗಾವಿಯಲ್ಲಿ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಹಾಗೂ ದಕ್ಷಿಣ ಭಾಗದ ಮಂಡ್ಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆಯನ್ನು ಸರ್ಕಾರದ ವತಿಯಿಂದ ಸ್ಥಾಪಿಸಲಾಗಿದೆ. ಈ ಎರಡೂ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ಕಲ್ಪಿಸಿ, ರೈತರಿಗೆ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದಾಗಿ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ಕಬ್ಬು ಬೆಳೆಗಾರ ರೈತರಿಗೂ ಅನುಕೂಲವಾಗುತ್ತಿದೆ. ಈ ಮೇಲಿನಂತೆ ಸಕ್ಕರೆ ನಿರ್ದೇಶನಾಲಯವು ಕಾರ್ಯನಿರ್ವಹಿಸಿ, ಕಬ್ಬು ಬೆಳೆಗಾರ ರೈತರ ಹಿತಕಾಪಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.
(ಅ)	ರಾಜ್ಯದಲ್ಲಿನ ಅತಿವೃಷ್ಟಿ-ಅನಾವೃಷ್ಟಿಯ ಸಮಸ್ಯೆಗಳ ನಡುವೆ ರೈತರು ತಾವು ಬೆಳೆದು ಮಾರಾಟ ಮಾಡಿದ ಕಬ್ಬಿನ ಹಣ ಸಕಾಲದಲ್ಲಿ ಕೈಗೆ ಸಿಗದೇ ತತ್ತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ರಾಜ್ಯದಲ್ಲಿ 2019-20ನೇ ಹಂಗಾಮಿನಲ್ಲಿ ಒಟ್ಟು 62 ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯ ನಿರ್ವಹಿಸಿದ್ದು, ದಿನಾಂಕ 31.08.2020ಕ್ಕೆ ರೂ.10622.76 ಕೋಟಿಗಳನ್ನು ಪಾವತಿಸಬೇಕಾಗಿದ್ದು, ರೂ.10655.14 ಕೋಟಿಗಳನ್ನು ಪಾವತಿಸಲಾಗಿದೆ. ಕೆಲವು ಕಾರ್ಖಾನೆಗಳು ಎಫ್.ಆರ್.ಪಿ.ಗೂ ಮೇಲ್ಪಟ್ಟು ಕಬ್ಬಿನ ದರ ಪಾವತಿಸಿರುವುದರಿಂದ ಶೇಕಡವಾರು ಪಾವತಿಯು ಹೆಚ್ಚಾಗಿದೆ. 15 ಕಾರ್ಖಾನೆಗಳು ರೂ.169.02 ಕೋಟಿಗಳನ್ನು ಪಾವತಿಸುವುದು ಬಾಕಿ ಉಳಿದಿರುತ್ತದೆ. ಈ ಬಾಕಿ ವಸೂಲಾತಿಗೆ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ.
(ಇ)	ಸರ್ಕಾರ ಕೊಟ್ಟ ಭರವಸೆ ಈಡೇರದೇ ವಿಫಲವಾಗಿದ್ದು ಬಾಕಿ ಮೊತ್ತ ಪಾವತಿ ಮಾಡಲಾಗದ ಕಾರ್ಖಾನೆಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ:	2019-20ನೇ ಹಂಗಾಮಿನಲ್ಲಿ ಒಟ್ಟು 62 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯನಿರ್ವಹಿಸಿರುತ್ತವೆ. ಈ ಕಾರ್ಖಾನೆಗಳು ದಿನಾಂಕ 31.08.2020ಕ್ಕೆ ರೂ.10622.76 ಕೋಟಿಗಳನ್ನು ಪಾವತಿಸಬೇಕಾಗಿದ್ದು, ರೂ.10655.14 ಕೋಟಿಗಳನ್ನು ಪಾವತಿಸಿದ್ದು, ರೂ.169.02 ಕೋಟಿಗಳು 15 ಕಾರ್ಖಾನೆಗಳಿಂದ ಬಾಕಿ ಉಳಿದಿರುತ್ತದೆ. 47 ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ಪೂರ್ಣವಾಗಿ ಪಾವತಿಸಿರುತ್ತವೆ. ಕೆಲವು ಕಾರ್ಖಾನೆಗಳು ಎಫ್.ಆರ್.ಪಿ.ಗೂ ಮೇಲ್ಪಟ್ಟು ಕಬ್ಬಿನ ದರ ಪಾವತಿಸಿರುವುದರಿಂದ ಶೇಕಡವಾರು ಪಾವತಿಯು ಹೆಚ್ಚಾಗಿದೆ. ಕಬ್ಬು (ನಿಯಂತ್ರಣ) ಆದೇಶ 1966ರ ಖಂಡ 3(3)ರ ಅವಕಾಶಗಳಂತೆ ಕಬ್ಬು ಸರಬರಾಜು ಮಾಡಿದ ರೈತರಿಗೆ 14 ದಿನಗಳೊಳಗಾಗಿ ಕಾರ್ಖಾನೆಗಳು ಎಫ್.ಆರ್.ಪಿ. ದರವನ್ನು ಪಾವತಿಸಬೇಕಿದೆ. ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗಾಗಿ ಕಾರ್ಖಾನೆಯು ಕಬ್ಬು ದರ ಪಾವತಿಸದಿದ್ದಲ್ಲಿ, ಅಂತಹ ಕಾರ್ಖಾನೆಗಳಿಂದ ಕಬ್ಬು (ನಿಯಂತ್ರಣ) ಆದೇಶ 1966ರ ಖಂಡ 3 ರಲ್ಲಿ ಹಾಗೂ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013ರ ಕಲಂ 9 ರಂತೆ ಶೇ.15ರ ಬಡ್ಡಿಯೊಂದಿಗೆ ವಸೂಲಿ ಮಾಡಲು ಅವಕಾಶಗಳಿವೆ. ಆ ಪ್ರಕಾರವಾಗಿ 2019-20ನೇ ಹಂಗಾಮಿನಲ್ಲಿ ಕಬ್ಬು ಅರೆದಿರುವ 58 ಕಾರ್ಖಾನೆಗಳಿಗೆ ಭೂಕಂದಾಯ ಬಾಕಿ ಎಂದು ಪರಿಗಣಿಸಿ, ಕಬ್ಬು ಬಿಲ್ಲು ಬಾಕಿಯನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದೆಂದು ತಿಳಿಸುವ ಶಾಸನಬದ್ಧ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿತ್ತು.
(ಈ)	ಈ ಕಬ್ಬು ಪೂರೈಸಿದ 15 ದಿನಗಳಲ್ಲಿ ಹಣ ಪಾವತಿ ಮಾಡಬೇಕೆಂಬ ನಿಯಮವಿದ್ದರೂ ರೈತರ ಹಣ ಸಿಗದಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು	

			ತದನಂತರ ಬಹುತೇಕ ಕಾರ್ಖಾನೆಗಳು ಕಬ್ಬು ಬಿಲ್ಲನ್ನು ಪಾವತಿಸಿರುತ್ತವೆ. ಆದಾಗ್ಯೂ ಕಬ್ಬು ಬಿಲ್ಲು ಪಾವತಿಸದೇ ಬಾಕಿ ಉಳಿಸಿಕೊಂಡ 3 ಸಕ್ಕರೆ ಕಾರ್ಖಾನೆಗಳ ವಿರುದ್ಧ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಅವಕಾಶಗಳಂತೆ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲು ಕಬ್ಬು (ನಿಯಂತ್ರಣ) ಆದೇಶ 1966ರ 3(8)ರ ರೀತ್ಯಾ ವಸೂಲಾತಿ ಪ್ರಮಾಣ ಪತ್ರಗಳನ್ನು ಹೊರಡಿಸಿ, ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿ, ಆದೇಶಿಸಲಾಗಿತ್ತು. ಈ ಪೈಕಿ ಎರಡು ಕಾರ್ಖಾನೆಗಳು ಶೇ.100 ರಷ್ಟು ಕಬ್ಬು ಬಿಲ್ಲು ತೀರುವಳಿ ಮಾಡಿರುತ್ತದೆ. ಈ ರೀತಿಯಾಗಿ ರೈತರ ಕಬ್ಬು ಬಿಲ್ಲು ಬಾಕಿ ವಸೂಲಾತಿಗೆ ಎಲ್ಲಾ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಸಂಖ್ಯೆ: ಸಿಐ 190 ಸಿಓಎಫ್ 2020

19/9

(ಅರಬೈಲ್ ಶಿವರಾಮ ಹೆಬ್ಬಾರ)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು